ಶ್ರೀ ವೀರೇಂದ್ರ ಪಾಟೀಲ್.—ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ.

ಶ್ರೀ ಎಂ. ನಾಗಪ್ಪ.—ತಾವು ಈಗಾಗಲೇ ಉತ್ತರ ಕೊಟ್ಟಿದ್ದೇನೆ ಎಂದು ಹೇಳಿದಿರಿ. ನಾನು ಸ್ಪಷ್ಟವಾಗಿ ತಮ್ಮನ್ನು ಕೇಳುತ್ತೇನೆ. ಹಿಂದಿರತಕ್ಕಂಥ ಮಾಜಿ ಮಂತ್ರಿಗಳ ಆಸ್ತಿಪಾಸ್ತಿಗಳ ಬಗ್ಗೆ ವಿವರಗಳನ್ನು ಕೊಡುವಂತೆ ಒತ್ತಾಯ ಮಾಡಲಿಕ್ಕೆ ಒಂದು ಕಾಯಿದೆಯನ್ನು ಈ ಸಭೆಯಲ್ಲಿ ತರಲಿಕ್ಕೆ ಸಾಧ್ಯ ಇದೆಯೇ, ಇದರ ಬಗ್ಗೆ ಏನು ಯೋಚನೆ ಮಾಡಿದ್ದೀರಿ ಎನ್ನುವುದಕ್ಕೆ ಉತ್ತರ ಕೊಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಈಗ ನಮ್ಮ ಮುಂದಿರುವ ಪ್ರಶ್ನೆಗೂ ಮಾನ್ಯ ಸದಸ್ಯರು ಕೇಳುವಂಥಾ ಪ್ರಶ್ನೆಗೂ ಸಂಬಂಧವಿಲ್ಲ. ಮಾಜಿ ಮಂತ್ರಿಗಳ ಬಗ್ಗೆ ಏನಾದರೂ ಒಂದು ಕಾನೂನು ತರಬೇಕೆಂದು ಕೇಳಿದ್ದಾರೆ. ಮಂತ್ರಿಗಳಿಗೇ ಆಗಲಿ, ಅಸೆಂಬ್ಲಿ ಸದಸ್ಯರುಗಳಿಗೇ ಆಗಲಿ ಕಾನೂನು ತರಬೇಕಾದರೆ ಅದು ಪ್ರತ್ಯೇಕ ಪ್ರಶ್ನೆ ಆಯಿತು.

1-30 P.M.

Sri A. R. BADRINARAYAN.—Will the Government explore the ways and means of securing this information effectively in a legal manner ?

Mr. SPEAKER.—This question was answered though not to the satisfaction of the hon. Member who put it.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಹಿಂದೆ ಇದ್ದ ಮುಖ್ಯ ಮಂತ್ರಿಗಳು ಈ ವಿಷಯ ಪ್ರಸ್ತಾಪ ಮಾಡಿದಾಗ ಸಭೆಯಲ್ಲಿ ಏನು ಭರವಸೆಯನ್ನು ಕೊಟ್ಟಿದ್ದರು ಎನ್ನುವುದನ್ನು ನಾನು ನೋಡಿಲ್ಲ ಎಂದು ಮುಖ್ಯ ಮಂತ್ರಿಯವರು ಹೇಳಿದರು. ಅವರು ಕೊಟ್ಟಿದ್ದಂಥ ಭರವಸೆಯನ್ನು ನೋಡಿ ಅವರು ಏನಾದರೂ ಹೇಳಿದ್ದಕ್ಕೆ ಮಾನ್ಯತೆ ಕೊಡಬೇಕು. ಅದನ್ನು ನಡೆಸತಕ್ಕ ಜವಾಬ್ದಾರಿ ಸರ್ಕಾರದ್ದು ಎಂದು ಅವರು ಭಾವಿಸುವುದಾದರೆ, ಈ ಪ್ರಶ್ನೆಯ ಬಗ್ಗೆ ಏನು ಮಾಡಬೇಕು ಎನ್ನುವುದನ್ನೆಲ್ಲ ಆಲೋಚನೆ ಮಾಡುವುದಕ್ಕೋಸ್ಕರ ಈ ಸಭೆಯ ಟೇಬಲ್ ಮೇಲೆ ಏನೇನು ಮಾಹಿತಿಯನ್ನು ಒದಗಿಸಿದ್ದಾರೋ ಅದನ್ನೆಲ್ಲ ಇಟ್ಟು ಮುಂದಿನ ಕಾರ್ಯಕ್ರಮ ತೆಗೆದುಕೊಳುತ್ತಾರೆಯೋ ಇಲ್ಲವೋ ?

ಶ್ರೀ ವೀರೇಂದ್ರ ಪಾಟೀಲ್.—ನನಗಿಂತಲೂ ಪೂರ್ವದಲ್ಲಿ ಮುಖ್ಯಮಂತ್ರಿಗಳಾಗಿದ್ದವರು ಈ ಸಭೆಗೆ ಭರವಸೆಯನ್ನು ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅವರು ಏನು ಭರವಸೆ ಯನ್ನು ಕೊಟ್ಟಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಒಂದು ವೇಳೆ ಮಾನ್ಯ ಸದಸ್ಯರ ಹತ್ತಿರ ಪ್ರೊಸೀಡಿಂಗ್ಸ್ ಕಾಪಿ ಇದ್ದರೆ, ಅದನ್ನು ಓದಿದ್ದರೆ ಅವರು ಏನು ಭರವಸೆ ಕೊಟ್ಟಿದ್ದಾರೆನ್ನುವುದು ಗೊತ್ತಾಗುತ್ತಿತ್ತು. ಮಾನ್ಯ ಸದಸ್ಯರು ಎರಡು ಮೂರು ಸಲ ಭರವಸೆ ಕೊಟ್ಟಿದ್ದರು ಎಂದು ಹೇಳುತ್ತ ಇರುವುದರಿಂದ ಅವರು ಏನು ಭರವಸೆ ಕೊಟ್ಟಿದ್ದಾರೆ ಎನ್ನುವುದನ್ನು ಪ್ರೊಸೀಡಿಂಗ್ಸ್ ತೆಗೆಸಿ ನೋಡಿ ಏನು ಕ್ರಮ ತೆಗೆದುಕೊಳ್ಳಬಹುದು ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಚ್. ಎನ್. ನಂಜೇ ಗೌಡ.—ಶ್ರೀ ಕೆ. ಹನುಮಂತಯ್ಯ ಮತ್ತು ಶ್ರೀ ಎಚ್. ಎಂ. ಚನ್ನಬಸಪ್ಪನವರು ಕಾನೂನುಬದ್ಧವಾಗಿ ಒಂದು ವಿಚಾರಣಾ ಆಯೋಗವನ್ನು ನೇಮಿಸಿದರೆ ಅವರಿಗೆ ಆಸ್ತಿಪಾಸ್ತಿಗಳ ವಿವರಗಳನ್ನು ಒದಗಿಸುವುದಾಗಿ ಹೇಳಿಲ್ಲವೇ ? ಆ ದೃಷ್ಟಿಯಿಂದ ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಶ್ರೀ ಹನುಮಂತಯ್ಯನವರಾಗಲೀ, ಶ್ರೀ ಚನ್ನಬಸಪ್ಪನವರಾಗಲೀ ಅಥವಾ ಯಾರೇ ಆಗಲೀ ಹೇಳಿದರು ಎಂದು ವಿಚಾರಣಾ ಆಯೋಗವನ್ನು ನೇಮಕ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಯಾರಾದರೂ ಸದಸ್ಯರು ಹೇಳುತ್ತಾರೆಂದು ಅದನ್ನು ತಕ್ಷಣವೇ ಮಾಡಬೇಕೆಂದಿಲ್ಲ. ಎಲ್ಲ ವಿಷಯಗಳನ್ನೂ ಸರ್ಕಾರ ಪರಿಶೀಲನೆ ಮಾಡಿ ಯಾವುದು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಬೇಕಾಗುತ್ತದೆ.

Electrification of Villages

231. Sri H. SIDDAVEERAPPA (Harihar).—

Will the Chief Minister be pleased to state :—

(*a*) the number of villages electrified in the State;

(*b*) whether there is any phased programme for rural electrification ;

(*c*) whether the Government is aware that a number of villages where rural electrification is provided, are cut off from power for non-payment of arrears to the Electrical Department ; if so, the number of villages thus cut off may be furnished ;

(*d*) whether Government has thought of remedying this defect by collecting the dues from the Village Panchayat and guarantee repayment to the Electricity Board ?

Sri D. PARAMESWARAPPA (Deputy Minister for Major Irrigation and Electricity).—

(*a*) 7,593 up to end of December 1968.

(*b*) Yes.

(*c*) (i) Yes.
(ii) About 935 villages to the end of December 1968.

(*d*) The matter is under examination.

Sri H. SIDDAVEERAPPA.—Supplementary to (*d*) : Since how long this matter is under the examination of the Government ?

† **Sri D. PARAMESWARAPPA.**—It is under the consideration of the Government since about 3 or 4 months.

Sri H. SIDDAVEERAPPA.—When are the Government likely to take a decision in the matter ?

Sri D. PARAMESWARAPPA.—As early as possible.

ಶ್ರೀ ಸದಾಶಿವಪ್ಪ ಪಾಟೀಲ್.—ಬಾಕಿ ಕೊಡಲಾರದ ಗ್ರಾಮಗಳಿಗೆ ವಿದ್ಯುತ್ತನ್ನು ಇಲಾಖೆಯವರು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಹೆಚ್ಚಾಗಿ ಚಿಂಚೋಳಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಕಟ್ ಆಫ್ ಆಗಿದೆ ಎಂದು ತಿಳಿದು ಬಂದಿದೆ. ಡಿಸ್‌ಕನೆಕ್ಷನ್ ಮಾಡಿದ ಮೇಲೆ ಯಾರ ಸಿಫಾರಸಿನ ಮೇಲೆ ಅಲ್ಲಿ ಎಲೆಕ್ಟ್ರಿಫಿಕೇಷನ್ ಮಾಡಿದರು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಇನ್‌ಸಿನ್ಯುಯೇಷನ್ ಮಾಡಿದ್ದಾರೆ ಅದು ದುರ್ದೈವದ ಸಂಗತಿ. ಅವರು ಹೇಳುವುದೇನೆಂದರೆ ಚಿಂಚೋಳಿ ಮುಖ್ಯ ಮಂತ್ರಿಗಳ ಚುನಾವಣಾ ಕ್ಷೇತ್ರ, ಅಲ್ಲಿ ಕೂಡ ಡಿಸ್‌ಕನೆಕ್ಷನ್ ಆಗಿದೆ ಎಂದು. ಮುಖ್ಯ ಮಂತ್ರಿಯವರ ಕ್ಷೇತ್ರವಿರಲಿ, ಬೇಕಾದವರದ್ದು ಇರಲಿ ಕಾನೂನು ಎಲ್ಲರಿಗೂ ಒಂದೇ. ಅದರ ಪ್ರಕಾರ ದುಡ್ಡು ಕೊಡದೆ ಇದ್ದರೆ ಎಲೆಕ್ಟ್ರಿಸಿಟಿ ಬೋರ್ಡಿನವರು ಕಟ್ ಆಫ್ ಮಾಡುತ್ತಾರೆ. ಚಿಂಚೋಳಿ ಕ್ಷೇತ್ರ ಮಾನ್ಯ ಸದಸ್ಯರಿಗೆ ಗೊತ್ತೇ ಇಲ್ಲ. ಅಲ್ಲ ಕಟ್ ಆಫ್ ಆಗಿದೆ ಎಂದು ಊಹೆ ಮಾಡಿರಬಹುದು. ಆ ರೀತಿ ಊಹೆ ಮಾಡುವುದಕ್ಕೆ ಅವಕಾಶ ವಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಾಜ್ಯದಲ್ಲಿ ಎಷ್ಟು ಹಳ್ಳಿಗಳಿವೆ ? ಅವುಗಳಲ್ಲಿ ಎಷ್ಟಕ್ಕೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ?

ಶ್ರೀ ಡಿ. ಪರಮೇಶ್ವರಪ್ಪ.—ಸುಮಾರು 27 ಸಾವಿರ ಹಳ್ಳಿಗಳಿವೆ. ಅದರ ಪೈಕಿ 7,593 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ.

ಶ್ರೀ ಎಸ್. ಶಿವಪ್ಪ.—ವಿದ್ಯುಚ್ಛಕ್ತಿ ಸರಬರಾಯಿ ನಿಲ್ಲದಂತೆ ಮಾಡಲು ಸರ್ಕಾರದವರೇ ಹಳ್ಳಿಗಳ ಪರವಾಗಿ ಬಾಕಿ ಕೊಡುವಂತೆ ಏರ್ಪಾಡೇಕೆ ಮಾಡಬಾರದು ? ವಸೂಲಾದಮೇಲೆ ಏಕೆ ಬುಕ್ ಅಡ್‌ಜಸ್ಟ್‌ಮೆಂಟ್ ಮಾಡಿಕೊಳ್ಳಬಾರದು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು),—ಈ ವಿಚಾರವನ್ನು ಈಗಾಗಲೇ ಪರಿಶೀಲನೆ ಮಾಡಲಾಗಿದೆ. ಈಗ ವಿಲೇಜ್ ಅಕೌಂಟಂಟನ್ನು ಎಲ್ಲ ಕಡೆಯೂ ನೇಮಕ ಮಾಡಲಾಗುತ್ತಿದೆ. ಅವರು ಪಂಚಾಯಿತಿ ಬಾಕಿ ವಸೂಲುಮಾಡಬೇಕೆಂದು ನಿರ್ಣಯವಾಗಿದೆ. ಅದಕ್ಕೆ ಸಂಬಂಧಪಟ್ಟ ಮಸೂದೆ ಮಾನ್ಯ ಸಭೆಯ ಮುಂದೆ ಬರುತ್ತದೆ. ಅದರಲ್ಲಿ ವಿದ್ಯುಚ್ಛಕ್ತಿ ಬಾಕಿ ಹಣ ಕೊಡಲು ಅವಕಾಶವಾಗುವಂತೆ ಮಾಡಿದೆ. ಆ ಬಿಲ್ಲು ಜಾರಿಗೆ ಬಂದಮೇಲೆ ಈಗಿರುವ ತೊಂದರೆ ಮುಂದೆ ಬರಲಾರದು.

ಶ್ರೀ ಎಂ. ನಾಗಪ್ಪ.—ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯನ್ನು ನಿಲ್ಲಿಸಲಾಗಿದೆ? ಆ ವಿವರ ಜಾಸ್ತಿಯಾದರೆ ಅದನ್ನು ಜೇಬರ್ ಮೇಲಿಡಲು ಸಾಧ್ಯವೇ?

Sri VEERENDRA PATIL.—The break-up of 935 villages is not before us at the moment; but it is very difficult to collect the information and place it on the Table of the House. Within a day or two this information will be made available to the members.

Electrification of Villages

414. Sri L. S. NAYAK (Gokak).—

Will the Chief Minister be pleased to state :—

(*a*) the number of villages in Belgaum District that have been electrified and the number of villages that will be electrified in future ;

(*b*) the number of electric pump sets supplied to the said district and whether the said pump sets will be distributed on talukwise basis or depending upon the irrigation facilities ?

Sri D. PARAMESWARAPPA (Deputy Minister for Major Irrigation and Electricity).—

(*a*) 119 villages up to December, 1968.
34 villages will be electrified during 1968-69.

(*b*) 1,645 pump sets will be supplied during 1968-69.
They will be distributed depending upon the irrigation facilities.

ಶ್ರೀ ಎಲ್. ಎಸ್. ನಾಯಕ್.—ಬೆಳಗಾಂ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲೂ ಎಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಪೂರೈಸಲಾಗಿದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿದೆಯೇ?

ಶ್ರೀ ಡಿ. ಪರಮೇಶ್ವರಪ್ಪ.—ಸಾಧ್ಯವಿದೆ.

ಶ್ರೀ ಎಲ್. ಎಸ್. ನಾಯಕ್.—ಹಾಗಾದರೆ ಅದನ್ನು ಹೇಳುತ್ತೀರಾ?

Sri D. PARAMESWARAPPA.—The breakup is as follows :—

Athani	...	4
Belgaum	...	15
Chikkodi	...	28
Gokak	...	12
Soundatti	...	3
Khanapur	...	12
Ramdurg	...	16
Sampgaon	...	13